ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU CITY UNIVERSITY

# Bengaluru City University

ಸೆಂಟ್ರಲ್ ಕಾಲೇಜು ಆವರಣ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂ.ಸಂಖ್ಯೆ:22295559, ಈ-ಮೇಲ್: registrarevlubcu@gmail.com

ಸಂಖ್ಯೆ:ಬೆಂ.ಕೇ.ವಿ/ಪವಿ/ಪಿ.ಜಿ/ಪ.ಶು/2022-23/2108 ದಿನಾಂಕ:07-06-2022

## ಅಧಿಸೂಚನೆ

ವಿಷಯ: ಜೂನ್/ಜುಲೈ-2022ರಲ್ಲಿ ನಡೆಯುವ 1ನೇ ಸೆಮಿಸ್ಟರ್ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸಿನ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

ಉಲ್ಲೇಖ: 1. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 07.06.2022

****

### I ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ದಿನಾಂಕಗಳು

| ಪರೀಕ್ಷಾ ಕಾರ್ಯಗಳ ವೇಳಾಪಟ್ಟಿ | | |
|---|---|---|
| ಕ್ರ.ಸಂ | ವಿವರಣೆ | ದಿನಾಂಕ |
| 1 | ಪರೀಕ್ಷಾ ಅರ್ಜಿಗಳನ್ನು UUCMS ಸ್ಟೂಡೆಂಟ್ ಪೋರ್ಟಲ್‌ನಲ್ಲಿ ತುಂಬುವುದು(ದಂಡಶುಲ್ಕರಹಿತ) | 14.06.2022 |
| 2 | ಪರೀಕ್ಷಾ ಅರ್ಜಿಗಳನ್ನು UUCMS ಸ್ಟೂಡೆಂಟ್ ಪೋರ್ಟಲ್‌ನಲ್ಲಿ ತುಂಬುವುದು ದಂಡ ಶುಲ್ಕದೊಂದಿಗೆ ರೂ.200/- ರಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 16.06.2022 |
| 3 | ಪರೀಕ್ಷಾ ಅರ್ಜಿಗಳನ್ನು UUCMS ಸ್ಟೂಡೆಂಟ್ ಪೋರ್ಟಲ್‌ನಲ್ಲಿ ತುಂಬುವುದು ದಂಡ ಶುಲ್ಕದೊಂದಿಗೆ ರೂ.1000/- ರಂತೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: | 17.06.2022 |
| 4 | ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕ | 22.06.2022 |
| 5 | ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಪ್ರಾರಂಭದ ದಿನಾಂಕ | 01.07.2022 |

### II ವಿವಿಧ ಪದವಿಗಳಿಗೆ ಅನ್ವಯವಾಗುವ ಪರೀಕ್ಷಾ ಶುಲ್ಕದ ವಿವರಗಳು

**(Following fees including Practical / Vive-Voce/ Dissertation / Project etc.)**

**1. MBA – Master of Business Administration**
I Semester (Full Exam. Fee) Rs. 2805/-

**2. MCA – Master of Computer Application**
I Semester (Full Exam. Fee) Rs. 2662/-

**In addition to the prescribed fee for the Examination, the below mentioned amount has to be paid by all the candidates irrespective of the caste / category.**

| | | | |
|---|---|---|---|
| 1. | Marks card fee | – | Rs.150/- |
| 2. | Processing fee | – | Rs. 75/- |
| | **Total** | - | **Rs. 225/-** |

**ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಸುವ ವಿಧಾನಗಳು.**

1. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಒಂದಕ್ಕಿಂತ ಹೆಚ್ಚು ಬಾರಿ ಭರಿಸದಂತೆ ಎಚ್ಚರ ವಹಿಸುವುದು. ಹೆಚ್ಚುವರಿ ಶುಲ್ಕ ಭರಿಸಿದಲ್ಲಿ ಯಾವುದೇ ಕಾರಣಕ್ಕೂ ಮರುಪಾವತಿ ಮಾಡಲಾಗುವುದಿಲ್ಲ.

2. ಅಧಿಸೂಚನೆಯಲ್ಲಿ ನಿಗದಿಪಡಿಸಿದ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.

3. ವಿದ್ಯಾರ್ಥಿಗಳ ಹಾಜರಾತಿ, ಅರ್ಹತೆ ಮತ್ತು ಪರೀಕ್ಷಾ ಮಾಹಿತಿಯನ್ನು ಪರಿಶೀಲಿಸಿದ ನಂತರ ವಿಭಾಗಗಳ ಮುಖ್ಯಸ್ಥರು / ಮಹಾವಿದ್ಯಾಲಯದ ಪ್ರಾಂಶುಪಾಲರು ವಿದ್ಯಾರ್ಥಿಗಳ ಪ್ರವೇಶ ಪತ್ರದ ತಡೆ ಹಿಡಿಯುವ ಬಗ್ಗೆ ದೃಢೀಕರಿಸಬೇಕು. ಒಂದು ವೇಳೆ ಅನರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರ ನೀಡಿದ್ದರೆ ಆಯಾ ವಿಭಾಗದ ಮುಖ್ಯಸ್ಥರು/ಮಹಾವಿದ್ಯಾಲಯದ ಪ್ರಾಂಶುಪಾಲರೇ ಜವಾಬ್ದಾರರು.

4. ಸೆಮಿಸ್ಟರ್ ಅಂತ್ಯದಲ್ಲಿ ಕನಿಷ್ಠ 75% ಹಾಜರಾತಿಯ ಅವಶ್ಯಕತೆಯನ್ನು ಅಭ್ಯರ್ಥಿಗಳು ಪೂರೈಸುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಹಾಜರಾತಿ ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರವನ್ನು ನೀಡಬಾರದು ಹಾಗೂ ಪರೀಕ್ಷೆ ಬರೆಯಲು ಅನುಮತಿಸಬಾರದು. ಸದರಿ ಹಾಜರಾತಿ ಪೂರೈಸದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

5. ಕರ್ನಾಟಕ ಸರ್ಕಾರವು SSP ಮೂಲಕ SC/ST/Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಅರ್ಹ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ವರ್ಗಾಯಿಸುವುದರಿಂದ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ಯಾವುದೇ ವಿನಾಯತಿ ಇರುವುದಿಲ್ಲ.

6. ತಾಂತ್ರಿಕ ಸಮಸ್ಯೆಗಳಿಗೆ ಈ ಕೆಳಕಂಡ ಸಹಾಯವಾಣಿಗೆ ಸಂಪರ್ಕಿಸುವುದು.
   ದೂರವಾಣಿ ಸಂಖ್ಯೆ: 080–22295559, 29572003
   ಈ–ಮೇಲ್–registrarevlubcu@gmail.com

Lokesha.V
ಕುಲಸಚಿವರು (ಮೌಲ್ಯಮಾಪನ)
7/6/22

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,
ಮುಖ್ಯಸ್ಥರು, ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಹಾಗೂ ಎ.ಬಿ.ಎ/ಎಂ.ಸಿ.ಎ ಕೋರ್ಸುಗಳನ್ನು ಹೊಂದಿರುವ ಸಂಯೋಜಿತ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.

ಪ್ರತಿ:

1. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಂಪಂಗಿರಾಮನಗರ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಜಿಲ್ಲಾ ಹಿಂದುಳಿದ ವರ್ಗಗಳ ನಿರ್ದೇಶನಾಲಯ, ಬೆಂಗಳೂರು ನಗರ. ಬೆಂಗಳೂರು.
3. ಆಪ್ತ ಶಾಖೆ, ಮಾನ್ಯ ಕುಲಪತಿಗಳು / ಕುಲಸಚಿವರು(ಆಡಳಿತ) / ಕುಲಸಚಿವರು(ಪರೀಕ್ಷಾಂಗ) / ವಿತ್ತಾಧಿಕಾರಿಗಳು (ಪ್ರಭಾರ), ಬೆಂಗಳೂರು ನಗರ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು-560001.
4. ವೆಬ್‌ಸೈಟ್ ನಿರ್ವಾಹಕರು, ಈ ಅಧಿಸೂಚನೆಯನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮತ್ತು ಎಲ್ಲಾ ಎ.ಬಿ.ಎ/ಎಂ.ಸಿ.ಎ ವಿಭಾಗಗಳ ಮುಖ್ಯಸ್ಥರಿಗೆ ಹಾಗೂ ಎ.ಬಿ.ಎ/ಎಂ.ಸಿ.ಎ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಎಸ್.ಎಂ.ಸ್ ಮೂಲಕ ಮಾಹಿತಿ ಒದಗಿಸಲು ಕೋರಿದೆ ಹಾಗೂ ಕಾಲೇಜುಗಳು ಸಂಬಂಧಪಟ್ಟ ವಿವರಗಳನ್ನು ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ ವೆಬ್‌ಸೈಟ್‌ನ್ನು ಓಪನ್ ಇಡಲು ಸಹ ಕ್ರಮ ತಗೆದುಕೊಳ್ಳಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.